# 4

ಇವೆಲ್ಲ ನಡೆದು ಮೂವತ್ತು ವರ್ಷಗಳಿಗೂ ಮೇಲಾಯಿತು. ಕಾಲ ಸರಿದಂತೆ ಸೂರಿಯ ಬದುಕಿನಲ್ಲಿ ಸಾಕಷ್ಟು ಬದಲಾವಣೆಗಳಾಗಿದ್ದವು. ಮುಖ್ಯವಾಗಿ, ತಾಯಿ ಸಹಸ್ರಾರು ರೂಪಾಯಿ ಬೆಲೆ ಬಾಳುವ ವಜ್ರದುಂಗುರ ಕಳೆದು ಹೋಯಿತಲ್ಲ, ಸೊಸೆ ಮೊಮ್ಮಕ್ಕಳನ್ನು ನೋಡುವ ಭಾಗ್ಯ ಹಣೆಯಲ್ಲಿ ಬರೆಯದೆ ಹೋಯಿತಲ್ಲ ಎಂದು ಕೊರಗಿ ಕೊರಗಿ ತೀರಿಕೊಂಡಿದ್ದಳು. ಸತ್ತ ಹೊಸತರಲ್ಲಿ ಸುಳ್ಳಿನ ಮೇಲೆ ಸುಳ್ಳು ಹೇಳಿ ತಾಯಿಯನ್ನು ತಾನೇ ಕೈಯಾರೆ ಸಾಯಿಸಿದನೇನೋ ಎಂಬ ಅನುಮಾನ ಬಂದು ಸೂರಿ ಬಿಕ್ಕಿ ಬಿಕ್ಕಿ ಅತ್ತುಬಿಡುತ್ತಿದ್ದ. ಬರಬರುತ್ತ ಜೋನಳ ಕನವರಿಕೆಯಲ್ಲಿ ಅದೂ ಮರೆತುಹೋಯಿತು.

ತಾಯಿ ಸತ್ತ ಮೇಲೆ ಊಟ, ತಿಂಡಿ ಕಾಫಿಗಳೆಲ್ಲ ಐತಾಳರ ಹೋಟೆಲಿನ ಕೃಪೆಯಿಂದ, ಹೊತ್ತು ಹೊತ್ತಿಗೆ ಮನೆಗೇ ಡಬ್ಬ, ಫ್ಲಾಸ್ಕು ಬಂದು ಬಿಡುತ್ತಿದ್ದವು. ಮೂವತ್ತು ವರ್ಷಗಳ ಹಿಂದೆ ಜೋನಳ ಸಂಬಂಧ ಕೂಡಿದ ಹೊಸದರಲ್ಲಿ ಒಮ್ಮೆ ಮೇಲಿನಿಂದ ಕೆಳಗಿನವರೆಗೂ ರಿಪೇರಿ ಆಗಿ ನವವಧುವಿನಂತೆ ಕಾಣುತ್ತಿದ್ದ ಮನೆ ಮತ್ತೆ ಹಾಳುಬಿದ್ದಿತ್ತು. ದಿನವೂ ಸ್ಟೇಷನ್ನಿಗೆ ಹೋಗುವುದು ತಪ್ಪದೇ ಇದ್ದರೂ ವಯಸ್ಸೋ ಬೇಸರವೋ ಸೂರಿ ಗೈಡ್ ಕೆಲಸ ಬಿಟ್ಟಿದ್ದ. ಆ ಕಾರಣ ಸಂಪಾದನೆಯೂ ನಿಂತಿತ್ತು. ಈಗ ಖರ್ಚಿಗೆ ಸೊಸೈಟಿಯ ಬಡ್ಡಿಯೊಂದೇ. ಬರುಬರುತ್ತ ಐತಾಳರ ಹೋಟೆಲ್ ಬಿಲ್‌ಗೆ ಬಡ್ಡಿಯ ಹಣ ಸಾಲದೆ ಅಸಲೂ ಕರಗತೊಡಗಿತು. ಅಸಲು ಮುಗಿದಂತೆ ಮನೆ, ಗದ್ದೆ ಸಾಲಕ್ಕೆ ಬಿದ್ದವು. ಸೂರಿ ಇವನ್ನೆಲ್ಲ ಮನಸ್ಸಿಗೆ ಹಚ್ಚಿಕೊಳ್ಳುತ್ತಿರಲಿಲ್ಲ. 'ಹೇಗೋ ಆಗುತ್ತೆ' ಎಂದು ಸುಮ್ಮನಿರುತ್ತಿದ್ದ.

ಸೂರಿಯ ರೂಪ ಸಹ ಅವನಿಗೆ ತಿಳಿಯದಂತೆಯೇ ಬದಲಾಗುತ್ತಿತ್ತು. ತಲೆಗೂದಲು ಒಂದೊಂದಾಗಿ ಬೆಳ್ಳಗಾಗಿ, ಬೆಳ್ಳಗಾದದ್ದು ಉದುರಿ, ತಲೆ ಕನ್ನಡಿಯಂತೆ ಹೊಳೆಯುತ್ತಿತ್ತು. ದವಡೆಯ ಹಲ್ಲುಗಳು ಬುಡತನಕ ಸವೆದು ಗಲ್ಲಗಳಲ್ಲಿ ಗುಳಿಬಿದ್ದಿತ್ತು. ಮಂಕುಗಣ್ಣಿಗೆ ಸೋಡಾಬಾಟಲಿಯ ದಪ್ಪಗಾಜಿನ ಕನ್ನಡಕ ಬಂದಿತ್ತು. ಆದರೆ ಶೇವ್ ಮಾತ್ರ ದಿನವೂ ಆಗಲೇಬೇಕು. ಈ ನಡುಗಾಲದಲ್ಲಿ ಒಮ್ಮೆಯಾದರೂ ಒಗೆಯದೆ ಮಣಕುಗಟ್ಟಿ ನಾತ ಹೊಡೆಯುತ್ತಿದ್ದ ಅದೇ ಹಳೆಯ ಸಿಲ್ಕ್ ಶರ್ಟ್, ವುಲನ್ ಪ್ಯಾಂಟುಗಳು ದೇಹವನ್ನು ಅಲಂಕರಿಸಿದ್ದವು. ಚೆನ್ನಾಗಿ ತೀಡಿ ಹಚ್ಚಿದ 'ಈವನಿಂಗ್ ಇನ್ ಪ್ಯಾರಿಸ್' ಶರ್ಟ್ ಪ್ಯಾಂಟಿನ ಕೊಳಕನ್ನು ಮರೆಮಾಚಿದ್ದವು. ಅವಿಲ್ಲದಿದ್ದರೆ ಜೋನ್ ಬಂದಾಗ ತನ್ನನ್ನು ಗುರುತಿಸುವುದಾದರೂ ಹೇಗೆ? ಹೊರರೂಪ ಎಷ್ಟೇ ಬದಲಾದರೂ ಸೂರಿಯ ಒಳಮನಸ್ಸು ಮಾತ್ರ ಹದಿನೆಂಟರ ಹಸಿಹಸಿ. ದಿನಚರಿ ಎಂದಿನಂತೆಯೇ ಸಾಗಿತ್ತು. ಹಗಲ ಹನ್ನೆರಡಕ್ಕೆ ತಪ್ಪದೆ ಡ್ಯೂಟಿಯ ಮೇಲೆ ಹೋಗಿ ಬರುತ್ತಿದ್ದ. ಡ್ಯೂಟಿಯ ಉದ್ದೇಶ ಜೋನ್ ಬರುತ್ತಾಳೆ, ಬಂದಾಗ ಅವಳನ್ನು ಎದುರುಗೊಳ್ಳಬೇಕು ಎಂದು. ಈಚೀಚೆಗೆ ಹಗಲುಗಾಡಿಯಲ್ಲದೆ ಸಂಜೆಗಾಡಿಗೂ ಹೋಗುತ್ತಿದ್ದ. ಹಗಲಿನ ಗಾಡಿ ತಪ್ಪಿ ಸಂಜೆಯ ಗಾಡಿಗೆ ಬಂದುಬಿಟ್ಟರೆ?

ಗಾಡಿ ಬಂದೊಡನೆಯೇ ಜೋನಿಗಾಗಿ ತಡಕುತ್ತ ರೈಲುಗಾಡಿಗಳ ಮುಂದೆ ಓಡಾಡುವುದು. ರೈಲು ಹೋಗಿ ಅವಳು ಬಂದಿಲ್ಲವೆಂದು ಖಚಿತವಾದಾಗ ಸುಸ್ತಾದಂತಾಗಿ ಅಲ್ಲೇ ಪ್ಲಾಟ್‌ಫಾರಂನ ಸೀಟಿನ ಮೇಲೆ ಗಂಟೆಗಟ್ಟಲೆ ಚಿಂತಿಸುತ್ತ ಕೂತಿದ್ದು ಮನೆಗೆ ಹಿಂದಿರುಗುವುದು. ರಾತ್ರಿ ಹಾಸಿಗೆ ಉರುಳಿಸಿ ದಿಂಬಿಗೆ ತಲೆಯಿಟ್ಟು ಗುಟುಕು ಗುಟುಕಾಗಿ ಬ್ರಾಂದಿ ಸವಿಯುತ್ತ, ಅಮ್ಮ ಸತ್ತ ನಂತರ ಎದುರುಗೋಡೆಯ ಶೃಂಗೇರಿ ಶಾರದಾಂಬೆಯ ಜಾಗವನ್ನು ಅಲಂಕರಿಸಿದ್ದ ಜೋನಳ ದೊಡ್ಡ ಸೈಜಿನ ಬಣ್ಣದ ಚಿತ್ರವನ್ನೇ ನೋಡುತ್ತ ಕೂರುವುದು. ಒಂದೊಂದು ಸಲ ಅವಳ ಕಾಗದಗಳನ್ನು, ಅಂದರೆ ತಾನು ಅವಳಿಗೆ ಬರೆದು 'ಅಂಚೆಚೀಟಿ ಸಾಲದು' ಎಂದು ವಾಪಸು ಬಂದ ಮೊದಮೊದಲಿನವನ್ನು